ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.860/2016**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮಧುಸೂದನ್ ರಾವ್** | | |
| **ತಂದೆಃಹೆಸರು** | **ಹಜರತಯ್ಯ** | **ಪಿಡಬ್ಲೂಃ** | **04** |
| **ವಯಸ್ಸು** | **52 ವರ್ಷ** | **ಸಿಡಬ್ಲೂಃ** | **03** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಯು. ಹಂಚಿನಾಳ ಕ್ಯಾಂಪ್.** | | |

ದಿನಾಂಕ 12-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಸಾಕ್ಷಿಗೆ ನಿಪಿ-2 & 3 ಪಂಚನಾಮೆಗಳನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 ಸಿ & 3 ಬಿ ಎಂದು ಗುರುತಿಸಲಾಯಿತು.

ನಾನು ಸಾಮಾನು ಕೊಡಿಸಿದ್ದರ ಸಲುವಾಗಿ ಸಹಿ ಮಾಡಿದ್ದೆ. ನಿಪಿ-2 ಕ್ಕೆ ಸಹಿಯನ್ನು ಏತಕ್ಕಾಗಿ ಮಾಡಿದೆ ಎಂಬುದು ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಕಡತದಲ್ಲಿರುವ ತಮ್ಮ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಪೋಲೀಸರು ಜಗಳದ ವಿಚಾರವಾಗಿ ನನ್ನ ಸಮಕ್ಷಮ ಮು. ಮಾ. ಗಳನ್ನು ಪಡೆದಿದ್ದರು, ಆದರೆ ಏತಕ್ಕಾಗಿ ಅವುಗಳನ್ನು ವಶಕ್ಕೆ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ.

2016 ರಲ್ಲಿ ಬೆ. 8 ಗಂಟೆಗೆ ಜೆಸ್ಕಾಂ ಕಛೇರಿಯಲ್ಲಿ & 2 ತಾಸುಗಳ ಅಂತರದಲ್ಲಿ ಠಾಣೆಯಲ್ಲಿ ಮು. ಮಾ. ಗಳನ್ನು ಪೋಲೀಸರು ತಮ್ಮ ತಾಬಾಕ್ಕೆ ತೆಗೆದುಕೊಂಡಿದ್ದರು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ27-03-2016 ರಂದು ಬೆ.8 ರಿಂದ 9 ಗಂಟಯೆವರೆಗೆ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಮ್ಮ & ಚಾಸಾ-2 ರವರ ಸಮಕ್ಷಮ ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ.

ಅದೇ ದಿನ ಬೆ.10 ರಿಂದ 11 ಗಂಟೆಯವರೆಗೆ ನಿಮ್ಮ & ಚಾಸಾ-2 ರವರ ಸಮಕ್ಷಮ ನಿಪಿ-3 ರಂತೆ ಜಪ್ತಿ ಪಂಚನಾಮೆಯನ್ನು ಮಾಡಿ, ಮುಮಾ ಗಳನ್ನು ವಶಕ್ಕೆ ಪಡೆದಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ.

ನಿಪಿ-2 & 3 ರಲ್ಲಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ಮು.ಮಾ. ಗಳು ಎಲ್ಲಾ ಕಡೆಗೆ ಸಿಗುತ್ತವೆ ಎಂದರೆ ಸಾಕ್ಷಿಯು ಸಿಗಬಹುದು ಎನ್ನುತ್ತಾರೆ. ಚೈನ್ ಕಟ್ಟಾದ ವಾಚ್ ರಿಪೇರಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ.

2. ನೀವು ಸೋಲಾರ್ ಹಾಕಿಸಿದ್ದಿರಿ ಎಂದರೆ ಸರಿ. ಸೋಲಾರನ್ನು ನೊಂದಣಿ ಮಾಡಿಸುವ ಕಾಲಕ್ಕೆ ಚಾಸಾ-1 ರವರು ಅಸಿಸ್ಟೆಂಟ್ ಮ್ಯಾನೇಜರ್ ಆಗಿದ್ದರು ಎಂದರೆ ಸರಿ. ಚಾಸಾ-1 ರವರು ಸೋಲಾರ್ ಹಾಕಿಸಿಕೊಡುವುದರಲ್ಲಿ ಹಣ ದುರ್ಬಳಕೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸೋಲಾರ್ ಹಾಕಿಸಿಕೊಡಲು ನಿಮಗೆ ಚಾಸಾ-1 ರವರು ಸಹಾಯ ಮಾಡಿದ್ದರು, ಆದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-2 & 3 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ, ಕಾರಣ ನನಗೆ ಓದಲು ಬರುವುದಿಲ್ಲ. ನೀವು ಪಂಚನಾಮೆಯ ಕಾಲಕ್ಕೆ ಇರಲಿಲ್ಲ, ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

3. ನನಗೆ ಘಟನಾ ಸ್ಥಳದ ಚೆಕ್ ಬಂದಿ ಹೇಳಲು ಬರುತ್ತದೆ. ಪಶ್ಚಿಮಕ್ಕೆ ರಸ್ತೆ ಇದೆ, ಪೂರ್ವಕ್ಕೆ ಖಾಲಿ ರಸ್ತೆ, ಉತ್ತರಕ್ಕೆ ಮುಂದುವರೆದ ಕಟ್ಟಡ, ದಕ್ಷಿಣಕ್ಕೆ ದಾರಿ. ಸದರಿ ಚೆಕ್ ಬಂದಿ ಸುಳ್ಳು ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**